**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ ಚನ್ನಪಟ್ಟಣ.**

**ಸಿ.ಸಿ. ಸಂಖ್ಯೆ: 283/2022**

ಚಾಸಾ:1 ಪ್ರಾಸಾ:1

| | | |
|---|---|---|
| ಹೆಸರು | : | ಸೋಮಶಂಕರ್ |
| ಗಂಡನ/ತಂದೆಯ ಹೆಸರು | : | ಲೇಟ್ ಗೋವಿಂದಶೆಟ್ಟಿ |
| ವಯಸ್ಸು | : | 34ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | **ಸುಳ್ಳೇರಿ** ಗ್ರಾಮ |

**ದಿನಾಂಕ 17.02.2026 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ಮಾನ್ಯ ಎಪಿಪಿ ಯವರಿಂದ:**

1ನೇ ಆರೋಪಿ ನನ್ನ ಮಾವ. 2ನೇ ಆರೋಪಿ ನನ್ನ ಅತ್ತೆ. 3ನೇ ಆರೋಪಿ ನನ್ನ ಚಿಕ್ಕಪ್ಪನ ಮಗ. 4ನೇ ಆರೋಪಿ ನನ್ನ ತಾತ. ಚಾಸಾ-2 ನನ್ನ ತಾಯಿ. ಚಾಸಾ3 ರಿಂದ 5 ರವರು ಅಕ್ಕ ಪಕ್ಕದ ಬೀದಿಯ ಮನೆಯವರು. ದಿ:07.01.2022 ರಂದು ಸುಮಾರು ಮಧ್ಯಾಹ್ನ 3.00 ಗಂಟೆಯ ಸಮಯದಲ್ಲಿ 1 ರಿಂದ 4ನೇ ಆರೋಪಿತರು ನನಗೆ ಅವಾಚ್ಯ ಶಬ್ದದಿಂದ ಅಂದರೆ ನಿನ್ನ ತಾಯಿ***ಅಕ್ಕ*** ಎಂದು ಬೈದಿರುತ್ತಾರೆ. ಆಗ ಚಾಸಾ2 ನನ್ನ ತಾಯಿ ಯಾಕೆ ನನ್ನ ಮಗನಿಗೆ ಬೈಯುತ್ತಾ ಇದ್ದೀರಿ ಎಂದು ಆರೋಪಿತರನ್ನು ಕೇಳಿದ್ದಕ್ಕೆ 1 ರಿಂದ 3ನೇ ಆರೋಪಿತರು ನನ್ನ ತಾಯಿ ಅಂದರೆ ಚಾಸಾ2 ರವರು ಧರಿಸಿದ್ದ 2 ಎಳೆಯ ಚಿನ್ನದ ಚೈನ್ ಅಂದರೆ 40 ಗ್ರಾಂಯುಳ್ಳ ಚಿನ್ನದ ಚೈನ್ ಅನ್ನು ಕಸಿದುಕೊಂಡಿರುತ್ತಾರೆ.1 ರಿಂದ 3ನೇ ಆರೋಪಿತರು ನಮಗೆ ಕೊಲೆ ಬೆದರಿಕೆಯನ್ನು ಹಾಕಿರುತ್ತಾರೆ. ಈ ಎಲ್ಲಾ ಘಟನೆಗೆ ಕಾರಣ ಎಂದರೆ ನಮ್ಮ ಮನೆಯ ಗೋಡೆ ಪಕ್ಕದಲ್ಲಿ ಆರೋಪಿತರು ಕುರಿಗಳನ್ನು ಕಟ್ಟಿಕೊಂಡಿದ್ದು, ಸದರಿ ಗೋಡೆಯು ಬಿದ್ದು ಹೋಗುವ ಸಂಭವವಿದ್ದು, ಕುರಿಗಳು ತಮ್ಮ ಮೂತ್ರವಿಸರ್ಜನೆ ಮಾಡಿದಾಗ ನಮ್ಮ ಗೋಡೆ ಬಿರುಕು ಬಿಟ್ಟು ಶಿಥಿಲಗೊಳ್ಳುವ ಪರಿಸ್ಥಿತಿಯಿದ್ದು ಸದರಿ ಗೋಡೆ ಬೀಳುವ ಸಂಭವಿದ್ದು ಈ ಘಟನೆಯ ಬಗ್ಗೆ ನಾನು ಪ್ರಶ್ನೆ ಮಾಡಿದಾಗ ಈ

ಗಲಾಟೆ ನಡೆದಿರುತ್ತದೆ. 4ನೇ ಆರೋಪಿ ನನಗೆ ದೊಣ್ಣೆಯಿಂದ ನನ್ನ ಬೆನ್ನಿನ ಮೇಲೆ ಮತ್ತು ಭುಜದ ಮೇಲೆ ಹೊಡೆದು ನೋವುಂಟು ಮಾಡಿರುತ್ತಾರೆ. ನಾನು ಸದರಿ ನೋವಿಗೆ ಮನೆಯಲ್ಲಿಯೇ ಚಿಕಿತ್ಸೆ ಮಾಡಿ ಕೊಂಡಿರುತ್ತೇನೆ . ಮೇಲೆ ಹೇಳಿದ ಘಟನೆಯ ಬಗ್ಗೆ ಊರಿನಲ್ಲಿ ಪಂಚಾಯತಿ ಮಾಡಿ ಬಗೆಹರಿಸಿಕೊಳ್ಳೋಣ ಎಂದು ಹೇಳಿದರೂ ಸಹ ಆರೋಪಿತರು ಸ್ಪಂದಿಸದ ಕಾರಣ ದಿಃ14.01.2022 ರಂದು ಠಾಣೆಗೆ ಹಾಜರಾಗಿ ದೂರನ್ನು ನೀಡಿರುತ್ತೇನೆ. ದೂರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದಿಃ18.01.2022 ರಂದದು ನಾನು ತೋರಿಸಿದ ಸ್ಥಳದಲ್ಲಿ ಅಂದರೆ ನಮಗೂ ಮತ್ತು ಆರೋಪಿತರಿಗೂ ಸೇರಿದ ಮನೆಯ ಮುಂಭಾಗದ ಪಡಸಾಲೆಯ ಸ್ಥಳದಲ್ಲಿ ಬೆಳಗ್ಗೆ 11.00-12.00 ಗಂಟೆಯವರೆಗೆ ಚಾಸಾ- 3 ರಿಂದ 5 ರವರು ಇದ್ದು ಪೋಲಿಸರು ಸ್ಥಳ ಮಹಜರ್ ಅನ್ನು ಜರುಗಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ದೊಣ್ಣೆಯಿಂದ ಆರೋಪಿತರು ಹಲ್ಲೆ ಮಾಡಿರುವುದಿಲ್ಲ ಸದರಿ ದೊಣ್ಣೆಯನ್ನು ಮುದ್ದೆ ಮಾಲು 1 ಎಂದು ಗುರುತಿಸಲಾಯಿತು. ಪ್ರಕರಣಕ್ಕೆ ಸಂಬಂದಪಟ್ಟಂತೆ ನಾನು ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ, ಅನುಮತಿಸಲಾಯಿತು).**

**<u>ಪಾಟೀ ಸವಾಲುಃ ಎಪಿಪಿಯವರಿಂದಃ</u>**

ದಿನಾಂಕ 15.01.2022 ರಂದು ಸಂಜೆ 5.00-5.30 ಗಂಟೆಯ ಸಮಯದಲ್ಲಿ ಮಹಜರ್ ಕ್ರಮ ಜರುಗಿಸಿದರು ಎಂದರೆ ಸರಿ. ಆ ಸಮಯದಲ್ಲಿ ನ್ಯಾಯಾಲಯದ ಮುಂದೆ ಇರುವ ಇದೇ ಒಂದು ಕಾಡು ಜಾತಿಯ ದೊಣ್ಣೆಯನ್ನು ಅಂದರೆ ಮು ಮಾ 1 ಅನ್ನು ಪೋಲಿಸರು ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ      ವಕೀಲರಿಂದಃ**

ಆರೋಪಿತರ ಪರ ವಕೀಲರು ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**